ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಶಿಡ್ಲಘಟ್ಟ.

**ಸಿ.ಸಿ. 1375/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | :: ಮಂಜುನಾಥ | | ಚಾಸಾ **: 1** |
| ತಂದೆ/ಗಂಡನ ಹೆಸರು | :: ರಂಗಪ್ಪ | | ಪ್ರ ಸಾ **: 1** |
| ವಯಸ್ಸು | :: 55 ವರ್ಷ | | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | :: ವ್ಯವಸಾಯ | | 13.07.2026 |
| ವಾಸ ಸ್ಥಳ | :: ವೈ ಹುಣಸೇನಹಳ್ಳಿ | | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ನನಗೆ ಚಾಸಾ.2 ರಿಂದ 8 ಮತ್ತು ಅರೋಪಿ 1, 2, 4 ಮತ್ತು 5 ಗೊತ್ತು 3 ನೇ ಅರೋಪಿ ಈಗ ಮೃತ ಪಟ್ಟಿರುತ್ತಾರೆ. ನನ್ನ ಜಮೀನಿನಲ್ಲಿ ಅಕ್ರಮ ಪ್ರಮೇಶ ಮಾಡಿ ಯಾವುದೇ ವಸ್ತುಗಳನ್ನು ನಾಶಪಡಿಸಲಿಲ್ಲ ಮತ್ತು ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ ಮತ್ತು ಫ್ರಾಣ ಬೆದರಿಕೆ ಹಾಕಿರುವುದಿಲ್ಲ.

ಈಗ್ಗೆ ಸುಮಾರು 7 ವರ್ಷಗಳ ಹಿಂದೆ ನನಗೆ ಮತ್ತು ಅರೋಪಿಗಳ ಬಾಯಿ ಮಾತಲ್ಲೆ ಜಗಳವಾದ ಕಾರಣ ಆ ಸಮಯದಲ್ಲಿ ಪೋಲೀಸರು ನನ್ನಿಂದ ಕೆಲವೊಂದು ದಾಖಲೆಗಳಿಗೆ ಸಹಿ ಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿರುವುದಿಲ್ಲ.

ಸಾಕ್ಷಿಯು ಕೃತ್ಯನಡೆದ ಸ್ಥಳದ ಪಂಚನಾಮೇಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ -2 ಎಂದು ಗುರುತಿಸಲಾಯಿತು. ನಿಪಿ 1 ಮತ್ತು 2 ರಲ್ಲಿ ಯಾವ ವಿಚಾರ ಬರೆದಿದೆ ಎಂದು ನನಗೆ ಗೊತ್ತಿಲ್ಲ.

**(ಮಾನ್ಯ ಸ.ಸಅ. ರವರು ಸಾಕ್ಷಿಯನ್ನು ಪ್ರತಿಕೂಲವೆಂದು ಪರಿಗಣಿಸಿದ್ದು, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ

ನಮ್ಮ ಗ್ರಾಮದ ಖಾತೆ ನಂ.70 ರಲ್ಲಿ ಪೂರ್ವ – ಪಶ್ಚಿಮ 30 ಅಡಿ, ಉತ್ತರ- ದಕ್ಷಿಣ – 100 ಅಡಿ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಈ ಸ್ವತ್ತಿನ 30*30 ಅಡಿ ಜಾಗದಲ್ಲಿ ನಾನು ಮನೆಯನ್ನು ಕಟ್ಟಿಕೊಂಡು ಇರುತ್ತಾನೆ ಎಂದರೆ ಸರಿ. ಮನೆಯ ಮುಂದೆ ಇರುವ ಖಾಲಿ ಜಾಗದಲ್ಲಿ ಹುಲ್ಲು ಬಣವೆ ಕಟ್ಟಲು ಕಲ್ಲು ಕೂಚ ಗಳನ್ನು ನೆಟ್ಟಿರುತ್ತೇನೆ ಎಂದರೆ ಸರಿ . ಈ ನಿವೇಶನದ ಬಗ್ಗೆ ಅರೋಪಿ ಸುರೇಶ್ ಹಾಗೂ ಆತನ ಮನೆಯವರು ತಕರಾರು ಮಾಡಿದ್ದು, ಈ ಬಗ್ಗೆ ನಾನು ಘನ

ನ್ಯಾಯಾಲಯದಲ್ಲಿ ಓ.ಎಸ್ 384/2017 ರಂತೆ ದಾವೇಯನ್ನು ಹೂಡಿದ್ದು ಘನ ನ್ಯಾಯಾಲಯವು ನನ್ನ ಪರವಾಗಿ ತಡೆ ಆಗ್ನೆ ಯನ್ನು ನೀಡಿರುತ್ತಾರೆ ಎಂದರೆ ಸರಿ.

ದಿಃ 08.04.2019 ರಂದು ಬೆಳ್ಳಗೆ ಸುಮಾರು 8.40 ಗಂಟೆ ಸಮಯದಲ್ಲಿ ಆರೋಪಿಗಳು ಅಕ್ರಮವಾಗಿ ಗುಂಪು ಕಟ್ಟಿ ಕೊಂಡು ನಮ್ಮ ವಾಸದ ಮನೆಯ ಮುಂದೆ ಇರುವ ಖಾಲಿ ನಿವೇಶದಲ್ಲಿ ಅಕ್ರಮ ಪ್ರವೇಶ ಮಾಡಿ ಹುಲ್ಲು ಬಣವೆ ಹಾಕಲು ನೆಟ್ಟಿದ್ದ ಕಲ್ಲು ಕೂಚಗಳನ್ನು ನಾಶ ಪಡಿಸಿ 14 ಸಾವಿರ ರೂ ಗಳನ್ನು ನಷ್ಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ನಾನು ಮನೆಯಿಂದ ಆಚೆ ಬಂದು ಅರೋಪಿತರನ್ನು ವಿಚಾರಿಸಿದಾಗ ನನಗೆ ಕೆಟ್ಟ ಮಾತುಗಳಿಂದ ಬೈದು ನನಗೆ ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ . ಆಗ ಚಾಸಾ 6, 7 ಮತ್ತು ಇತರರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ.

ಈ ವಿಚಾರವಾಗಿ ಹಿರಿಯರು ಪಂಚಾಯಿತಿ ಮಾಡುವುದ್ದಕ್ಕೆ ತಿಳಿಸಿದ್ದು ಅರೋಪಿಗಳು ಪಂಚಾಯಿತಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಈ ವಿಚಾರವಾಗಿ ದಿಃ19.07.2019 ರಂದು ಪೋಲೀಸ್ ಠಾಣೆಗೆ ಹಾಜರಾಗಿ ದೂರುನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ .

ಅದೇ ದಿನ ಪೋಲಿಸರು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ನಾನು ತೋರಿಸಿದ ಜಾಗದಲ್ಲಿ ನನ್ನ ಹಾಗುಾ ಚಾಸಾ 2 ಮತ್ತು 3 ರವರು ಸಮಕ್ಷಮ ಮದ್ಯಾಹ್ನ 12.15 ರಿಂದ 1.15 ರವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಇರುವ ವಿಚಾರವನ್ನು ನಾನು ಓದಿಕೊಂಡು ಸಹಿ ಮಾಡಿರುತ್ತೇನ ಎಂದರೆ ಸರಿಯಲ್ಲ.

ನಾನು ಮತ್ತು ಆರೋಪಿತರು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಹಾಗಾಗಿ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ವಕೀಲರಿಂದಃ ಇಲ್ಲ</u>

<u>ಮರು ವಿಚಾರಣೆ ಇಲ್ಲಃ</u>

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸರಿ ಇದೆ.**

ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ. ಶಿಡ್ಲಘಟ್ಟ.**